
# ಮರಳುಗಾಡಿನಲ್ಲಿ ಓಯಸಿಸ್!



ಇಸ್ರೇಲ್ ದೇಶದ ಅರ್ಧಕ್ಕೂ ಹೆಚ್ಚು ಭಾಗ ಮರಳುಗಾಡು. ಈ ಮರುಭೂಮಿಯನ್ನು ನಂದನವಾಗಿಸುವ ಕನಸು ಕಂಡ ದೇಶದ ಮೊದಲ ಪ್ರಧಾನಿ ಬೆನ್ ಗುರಿಯನ್‌ಗೆ ಮಾದರಿ ಆಗಿದ್ದು ಭಾರತ ರೂಪಿಸಿದ 'ಮಹಾತ್ಮ'.


**ಆನಂದತೀರ್ಥ ಪ್ಯಾಟಿ**

**ಅಸಹನೀಯ** ಧಗೆ ಉಕ್ಕಿಸುತ್ತಿದ್ದ ಇಸ್ರೇಲಿನ ಮರಳುಗಾಡಿನ ಮಧ್ಯೆ 'ಬೆನ್ ಗುರಿಯನ್ ವಿಶ್ವವಿದ್ಯಾಲಯ'ದ ಆವರಣದಲ್ಲಿ ಮುದ ನೀಡುವ ಸಸ್ಯರಾಶಿ. ಕೃಷಿ ಸಂಶೋಧನಾ ಕೇಂದ್ರದೊಳಗೆ ಹೋಗುತ್ತಿದ್ದಾಗ ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ಫಲಕ– 'ಬೆನ್ ಗುರಿಯನ್ ಗೋರಿ'. ನಮ್ಮ ತಂಡವನ್ನು ಕರೆದೊಯ್ಯುತ್ತಿದ್ದ ರಾನ್ ನೆತಾಂಜನ್‌ಗೆ– 'ಆ ಸ್ಮಾರಕ ನೋಡಬೇಕು. ಕರೆದುಕೊಂಡು ಹೋಗಿ ಪ್ಲೀಸ್...' ಅಂತ ಗಂಟುಬಿದ್ದೆ. ಅದನ್ನು ಕೇಳಿ ಕಣ್ಣರಳಿಸಿದ ರಾನ್ 'ಅದ್ಯಾಕೆ? ಬೆನ್ ಮನೆಗೇ ಕರೆದುಕೊಂಡು ಹೋಗುವೆ' ಎಂಬ ಭರವಸೆ ನೀಡಿದ. ನಿಗದಿತ ಭೇಟಿಯಲ್ಲಿ ಅರ್ಧ ತಾಸು ಉಳಿತಾಯ ಮಾಡಿ, ಲಗುಬಗೆಯಲ್ಲಿ ವ್ಯಾನ್ ಹತ್ತಿ ಹೊರಟು, ಹತ್ತು ನಿಮಿಷದಲ್ಲಿ 'ಬೆನ್ ಗುರಿಯನ್ ಡೆಸರ್ಟ್ ಹೋಮ್' ದ್ವಾರದಲ್ಲಿ ನಿಂತಿದ್ದೆವು.

ಇಸ್ರೇಲ್‌ನ ಮೊದಲ ಪ್ರಧಾನಿ ಡೇವಿಡ್ ಬೆನ್ ಗುರಿಯನ್. ಅಷ್ಟೇ ಹೇಳಿದರೆ ಸಾಕಾಗದು. ಹತ್ತಾರು ಕ್ಷೇತ್ರಗಳಲ್ಲಿ ಇಸ್ರೇಲ್ ಇಂದು ಸಾಧಿಸಿದ ಪ್ರಗತಿಯ ನೀಲನಕ್ಷೆಯನ್ನು ಬರೆದ ಮುತ್ಸದ್ದಿ. ರಷ್ಯಾದಲ್ಲಿ 1886ರಲ್ಲಿ ಜನಿಸಿ, 1906ರಲ್ಲಿ ಇಸ್ರೇಲ್‌ಗೆ (ಆಗಿನ್ನೂ ಈ ದೇಶ ಸ್ಥಾಪನೆಯಾಗಿರಲಿಲ್ಲ) ಬಂದು, ಕೃಷಿ ಕೆಲಸಗಾರನಾಗಿ ದುಡಿಯಲು ಶುರು ಮಾಡಿದರು. 1915ರಲ್ಲಿ ಈ ಪ್ರದೇಶದಿಂದ ಉಚ್ಚಾಟನೆಗೊಂಡು, ಅಮೆರಿಕಕ್ಕೆ ವಲಸೆ ಹೋದರು. 1935ರಲ್ಲಿ ಯಹೂದಿ ಏಜೆನ್ಸಿ ಮುಖ್ಯಸ್ಥನಾಗಿ ಆಯ್ಕೆಯಾಗಿ, ಹೋರಾಟದಲ್ಲಿ ತೊಡಗಿದರು. 1948ರ ಮೇ 14ರಂದು ಇಸ್ರೇಲ್ ಸ್ಥಾಪನೆಯನ್ನು ಅಧಿಕೃತವಾಗಿ ಪ್ರಕಟಿಸಿದರು. ಅವರೇ ದೇಶದ ಮೊದಲ ಪ್ರಧಾನಿಯಾದರು.

ಅರ್ಧಕ್ಕಿಂತ ಹೆಚ್ಚು ಭಾಗ ಮರುಭೂಮಿಯನ್ನೇ ಹೊಂದಿರುವ ಇಸ್ರೇಲ್ ಜಗತ್ತಿಗೇ ಮಾದರಿಯಾಗುವಂಥ ಸಾಧನೆ ಮಾಡಬೇಕು ಎಂಬ ಹಂಬಲವಿದ್ದ ಬೆನ್ ಗುರಿಯನ್, ಅದಕ್ಕಾಗಿ ಶ್ರಮಿಸಿದರು; ಸಫಲರೂ ಆದರು. ದೇಶದ ಮೊದಲ ಪ್ರಧಾನಿಯಾಗಿ ಹತ್ತು ವರ್ಷ ಆಡಳಿತ ನಡೆಸಿ, 1953ರಲ್ಲಿ ರಾಜೀನಾಮೆ ನೀಡಿದರು. 'ದೇಶದ ಏಳಿಗೆಗೆ ದುಡಿಯಬೇಕೆಂದರೆ ನಮ್ಮ ನೆಲದಲ್ಲೇ ಇದ್ದು ಅದಕ್ಕಾಗಿ ಶ್ರಮಿಸಬೇಕು' ಎಂದು ಪದೇ ಪದೇ ಹೇಳುತ್ತಿದ್ದ ಗುರಿಯನ್, ಅದನ್ನು ನಿರೂಪಿಸಲೆಂದೇ ಎಸ್‌ಡೆ ಬೊಕೆರ್‌ನಲ್ಲಿದ್ದ 'ಕಿಬೂತ್'ಗೆ (ಸಮುದಾಯ ಒಡೆತನದ ವ್ಯವಸ್ಥೆ) ಸೇರ್ಪಡೆಯಾದರು. ಆದರೆ ಎರಡು ವರ್ಷಗಳ ಬಳಿಕ ಅವರನ್ನು ಪ್ರಧಾನಿ ಹುದ್ದೆ ಮತ್ತೆ ಹುಡುಕಿಕೊಂಡು ಬಂತು. ಎರಡನೇ ಸಲ ಪ್ರಧಾನಿಯಾಗಿ, ಹತ್ತು ವರ್ಷಗಳ ಬಳಿಕ ರಾಜೀನಾಮೆ ನೀಡಿ, ಮತ್ತೆ ಅದೇ ಕಿಬೂತ್‌ಗೆ ಬಂದಿಳಿದರು. ಮುಂದಿನ ಹತ್ತು ವರ್ಷಗಳ ಕಾಲ ಅಲ್ಲೇ ವಾಸವಾಗಿದ್ದರು. 1963ರಲ್ಲಿ ನಿಧನರಾದರು.

'ಇಸ್ರೇಲ್‌ನ ಭವಿಷ್ಯ ಬದಲಿಸಿದ ನೇತಾರ', 'ಭದ್ರ ಬುನಾದಿ ಹಾಕಿದ ನಾಯಕ' ಎಂಬೆಲ್ಲ ವಿಶೇಷಣಗಳಿಂದ ಬೆನ್ ಗುರಿಯನ್ ಖ್ಯಾತಿ ಪಡೆದಿದ್ದಾರೆ. ಅವರ ಮನೆಯನ್ನು ಸ್ಮಾರಕವಾಗಿ ಪರಿವರ್ತಿಸಿ, ಅದಕ್ಕೆ 'ಡೆಸರ್ಟ್ ಹೋಮ್' ಎಂದು ಹೆಸರಿಸಲಾಗಿದೆ. ಜಗತ್ತಿನ ವಿವಿಧೆಡೆಯಿಂದ ಬರುವ ಪ್ರವಾಸಿಗರು ಈ ಮನೆ ನೋಡದೇ ಹೋದರೆ, ಅವರ ಪ್ರವಾಸ ಅಪೂರ್ಣವಾದಂತೆ! ಬಿಸಿಲ ಧಗೆಯ ಮಧ್ಯೆ ಹಸಿರುರಾಶಿ ಹೊದ್ದು ನಿಂತ 'ಡೆಸರ್ಟ್ ಹೋಮ್' ನೋಡುತ್ತಿದ್ದರೆ, ಬೆನ್ ಗುರಿಯನ್ ಕನಸು ನನಸಾಗಿರುವುದು ಕಾಣಿಸುತ್ತದೆ.



ಬೆನ್ ಗುರಿಯನ್ ಕೊಠಡಿಯಲ್ಲಿರುವ ಏಕೈಕ ಚಿತ್ರ ಮಹಾತ್ಮ ಗಾಂಧೀಜಿಯದು

ಮನೆಯ ಹೊರಭಾಗದಲ್ಲಿ ಬೆನ್‌ಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಅಪರೂಪದ ಕಡತಗಳು, ಮಹತ್ವದ ಕಾಗದಪತ್ರಗಳು, ಅವರ ನಿಲುವಂಗಿ, ಬಳಸಿದ ಪಿಸ್ತೂಲು ಇತ್ಯಾದಿ. ಅದನ್ನು ದಾಟಿ ಒಳಬಂದರೆ, ಎತ್ತರದ ಮರಗಳ ನೆರಳಿನಲ್ಲಿರುವ ಮನೆ ಕಾಣಿಸುತ್ತದೆ. ಇಲ್ಲೇ ಬೆನ್ ಪತ್ನಿ ಪೌಲಾ ಜತೆ ದಶಕಗಳ ಕಾಲ ಬದುಕಿದ್ದರು.

ಪ್ರವೇಶಕ್ಕೆ ನಿಗದಿ ಮಾಡಿದ್ದ ಸಮಯ ಮುಗಿದಿತ್ತಾದರೂ, ಭಾರತದವರು ಎಂಬ ಕಾರಣಕ್ಕೆ ಮನೆಯೊಳಗೆ ಹೋಗಲು ಅವಕಾಶ ಸಿಕ್ಕಿತು! ಆರಂಭದಲ್ಲೇ ಅತಿಥಿಗಳ ಭೇಟಿಗೆ ಚಿಕ್ಕ ಕೊಠಡಿ, ನಂತರ ಸುಮಾರು 5,000 ಪುಸ್ತಕಗಳನ್ನು ಜೋಡಿಸಿರುವ ಗ್ರಂಥಾಲಯ. 'ಈ ಕಡೆ ಬನ್ನಿ' ಎಂದು ಬೆನ್ ಗುರಿಯನ್‌ರ ಬೆಡ್ ರೂಮಿನತ್ತ ಕರೆದೊಯ್ದ ರಾನ್– 'ಅವರು ನಿದ್ದೆ ಮಾಡುತ್ತಿದ್ದುದೇ ದಿನಕ್ಕೆ ಮೂರು ತಾಸು ಮಾತ್ರ. ಉಳಿದ ಸಮಯವನ್ನು ಇಲ್ಲೇ ಕುಳಿತು ಓದುತ್ತಿದ್ದರು' ಎಂದು ವಿವರಿಸಿದ.

ಆ ಚಿಕ್ಕ ಕೊಠಡಿಯಲ್ಲಿ ಮಂಚ, ಅದರ ಮೇಲೆ ಹಾಸಿಗೆ, ದಿಂಬು, ಕೆಳಗೆ ಚಪ್ಪಲಿಗಳು, ಪಕ್ಕದಲ್ಲಿ ಪುಸ್ತಕಗಳನ್ನಿಟ್ಟ ಸಣ್ಣ ಟೇಬಲ್ ಕಾಣಿಸಿದವು. 'ತಮ್ಮಲ್ಲಿರುವ ದೇಶಪ್ರೇಮ, ಹೋರಾಟ, ಸಾಧಿಸುವ ಛಲ ಎಲ್ಲಕ್ಕೂ ಒಬ್ಬನೇ ವ್ಯಕ್ತಿ ಸ್ಫೂರ್ತಿ ಎಂದು ಬೆನ್ ಹೇಳುತ್ತಿದ್ದರು. ಅದಕ್ಕಾಗಿ ಬೆಳಿಗ್ಗೆ ಎದ್ದ ಕೂಡಲೇ ಆ ವ್ಯಕ್ತಿಯ ಚಿತ್ರ ನೇರವಾಗಿ ಕಾಣುವಂತೆ ಎದುರಿನ ಗೋಡೆಯ ಮೇಲೆ ಹಾಕಿಸಿದರು. ಅದನ್ನು ಹೊರತುಪಡಿಸಿದರೆ ಬೇರಾವ ಫೋಟ ಇಲ್ಲೆಲ್ಲೂ ಇಲ್ಲ' ಎಂದು ಹೇಳಿದ ರಾನ್. 'ಆ ಫೋಟೋ ಯಾವುದು ಗೊತ್ತೇ?' ಎಂದು ನಮ್ಮನ್ನು ಕೇಳಿ ಉತ್ತರಕ್ಕೂ ಕಾಯದೇ '...ಇಲ್ಲೇ ನನ್ನ ಬೆನ್ನ ಹಿಂದೆಯೇ ಇದೆ ನೋಡಿ' ಎಂದು ಪಕ್ಕಕ್ಕೆ ಸರಿದ. ಕುತೂಹಲದಿಂದ ಆ ಕಡೆ ನೋಡಿದ ನಾವು ದಿಗ್ಭ್ರಮೆಯಿಂದ ನಮಗರಿವಿಲ್ಲದಂತೆಯೇ 'ಹ್ವಾಂ..!' ಎಂದು ಉದ್ಗರಿಸಿದೆವು.

ಅಲ್ಲಿದ್ದುದು ಮಹಾತ್ಮ ಗಾಂಧಿ!

ಮುಂದಿನ ಕೆಲ ನಿಮಿಷ ಯಾರಿಂದಲೂ ಮಾತುಗಳೇ ಹೊರಡಲಿಲ್ಲ. ಬಾಪು ಚಿತ್ರದ ಕೆಳಗೆ ಬೆನ್ ಗುರಿಯನ್ ಮಾತು ಹೀಗಿತ್ತು:

'ಪೂರ್ವ ದೇಶಗಳ ನೈತಿಕ ಶಕ್ತಿಗಳೆಲ್ಲ ಪ್ರಾಯಶಃ ಭಾರತದ ಮಹಾತ್ಮ ಗಾಂಧಿ ಎಂಬ ಮಹಾನ್ ನಾಯಕನಲ್ಲೇ ಮಡುಗಟ್ಟಿವೆ ಎನಿಸುತ್ತದೆ. ಅಷ್ಟರಮಟ್ಟಿಗೆ ಆ ಅಪ್ರತಿಮ ವ್ಯಕ್ತಿ ತನ್ನ ಅಹಿಂಸೆಯೆಂಬ ಆಯುಧವನ್ನೆತ್ತಿ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸುತ್ತಿದ್ದಾರೆ'.

ಬಾಪು ದೇಶಕಾಲಗಳನ್ನು ಮೀರಿರುವುದು ಹೀಗೆ.

⌘



ಬೆನ್ ಗುರಿಯನ್ ವಿಶ್ರಾಂತಿ ಕೊಠಡಿ